

# ತಲೆಕೂದಲ ಆರೈಕೆಗೆ ಜೆನೊ ಹೋಮಿಯೋಪತಿ

ತಲೆಕೂದಲು ಉದುರುವ ಸಮಸ್ಯೆ, ಬಕ್ಕತಲೆ, ಅನಾರೋಗ್ಯಕರ ತಲೆಗೂದಲು.. ಮುಂತಾದ ಎಲ್ಲ ಸಮಸ್ಯೆಗಳಿಗೆ ‘ಜೆನೊ ಹೋಮಿಯೋಪತಿ’ ಎಂಬ ಹೊಸ ಚಿಕಿತ್ಸಾ ವಿಧಾನ ವರದಾನವಾಗಲಿದೆ. ಈ ಪದ್ಧತಿಯಲ್ಲಿ ಸಮಸ್ಯೆಯ ಆಳಕ್ಕಿಳಿದು ಬೇರು ಸಮೇತ ನಿವಾರಣೆ ಮಾಡುತ್ತದೆ. ವ್ಯಕ್ತಿಯ ಆನುವಂಶಿಕ ಸಮಸ್ಯೆಗಳ ನಿವಾರಣೆಯತ್ತ ದೃಷ್ಟಿಹರಿಸಿ ಚಿಕಿತ್ಸೆ ನೀಡಿದಾಗ ತಲೆಕೂದಲ ಸಮಸ್ಯೆ ಸಂಪೂರ್ಣ ಪರಿಹಾರವಾಗಲು ಸಾಧ್ಯ. ಇದು ವೈಜ್ಞಾನಿಕ, ಸುರಕ್ಷಿತ ಮತ್ತು ವಿನೂತನವಾದ ಚಿಕಿತ್ಸಾ ವಿಧಾನವಾಗಿದ್ದು ಯಾವುದೇ ಅಡ್ಡಪರಿಣಾಮಗಳೂ ಇರುವುದಿಲ್ಲ ಎನ್ನುವುದು ಹೋಮಿಯೋಪತಿ ತಜ್ಞರ ಅಭಿಮತ.

■ **ಉಮಾ ಅನಂತ್**

ಬೆಂಗಳೂರಿನ ಮೌನೇಶ್‌ಗೆ ಬಕ್ಕತಲೆ ಸಮಸ್ಯೆ. ವಯಸ್ಸು ಕೇವಲ 40 ಆಗಿದ್ದರೂ ತಲೆಯಲ್ಲಿ ಕೂದಲು ಮಾತ್ರ ಬೆರಳೆಣಿಕೆಯಷ್ಟೆ. ಆಯುರ್ವೇದ ಚಿಕಿತ್ಸೆ, ಸ್ಪಾ, ಬ್ಯೂಟಿ ಪಾರ್ಲರ್, ಮನೆ ಮದ್ದು.. ಏನೇ ಮಾಡಿದರೂ ಸಮಸ್ಯೆ ನಿವಾರಣೆಯಾಗಲೇ ಇಲ್ಲ. ಐಟಿಯಲ್ಲಿ ಕೆಲಸ ಮಾಡುವ ಮೌನೇಶ್‌ಗೆ ಮಾನಸಿಕ ಒತ್ತಡ, ಸಮಯಕ್ಕೆ ಸರಿಯಾಗಿ ಊಟ ತಿಂಡಿ ಸಿಗದೇ ಇರುವುದು, ನಿದ್ದೆಗೆಡುವುದು.. ಈ ಎಲ್ಲ ತೊಂದರೆಗಳಿಂದ ಬಕ್ಕತಲೆ ಉಂಟಾಗಿದೆ ಎಂಬುದು ಸ್ಪಷ್ಟ.



ಡಾ. ಮುಖೇಶ್ ಬಾತ್ರಾ

ಮೂವತ್ತೈದರ ಹರೆಯದ ಸುಮಲತಾಳಿಗೂ ತಲೆಕೂದಲು ಉದುರುವ ಸಮಸ್ಯೆ. ಕೇಶ ತಜ್ಞರ ಬಳಿ ಹೋದಾಗ ಈಕೆಗೆ ಹಾರ್ಮೋನಿನ ಏರುಪೇರು ಜತೆಗೆ ಕೆಮಿಕಲ್ ಶಾಂಪು ಬಳಸಿರುವುದರಿಂದ ಈ ಸಮಸ್ಯೆ ಎಂಬುದು ಗೊತ್ತಾಯಿತು. ಸೂಕ್ತವಾದ ಚಿಕಿತ್ಸೆ ಪಡೆದರೂ ತಲೆಕೂದಲು ಉದುರುವ ಸಮಸ್ಯೆ ಪರಿಹಾರವಾಗಲೇ ಇಲ್ಲ. ಕೊನೆಗೆ ಈ ಇಬ್ಬರೂ ತಮ್ಮ ತಲೆಕೂದಲ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಿಕೊಂಡದ್ದು ಹೋಮಿಯೋಪತಿ ಚಿಕಿತ್ಸೆಯಿಂದ. ಈಗ ಮೌನೇಶ್ ಹಾಗೂ ಸುಮಲತಾ ಇಬ್ಬರ ಮುಖಗಳಲ್ಲೂ ಸಂತಸದ ನಗೆ ಚಿಮ್ಮಿದೆ.

ಒಂದಲ್ಲ ಒಂದು ಕಾರಣಕ್ಕೆ ತಲೆಕೂದಲು ಉದುರುವುದು, ಬಕ್ಕತಲೆಯಾಗುವುದು, ತಲೆಹೊಟ್ಟು, ತುರಿಕೆ, ಕವಲು, ಸೀಳು ಕೂದಲು, ಕೂದಲು ಬಣ್ಣಗೆಡುವುದು... ಹೀಗೆ ಸಮಸ್ಯೆಗಳು ಹತ್ತಾರು.